

ಕಾಣುತ್ತವೆ. ಮಹಿಳೆಯರ ಸೌಂದರ್ಯವರ್ಧನೆಗೆ ವೈಟ್ ಐ ಲೈನರ್ ಅತಿ ಅಗತ್ಯ' ಎನ್ನುತ್ತಾರೆ ಬ್ಯೂಟೀಷಿಯನ್ ತಲಾ ರವೀಶ್.

'ವೈಟ್ ಐ ಲೈನರ್ ಕಣ್ಣುಗಳನ್ನು ಕಾಂತಿಯುತವಾಗಿ ಹಾಗೂ ಎದ್ದುಕಾಣುವಂತೆ ಮಾಡುತ್ತದೆ. ಬಿಳಿ ಐ ಲೈನರ್ ಎಲ್ಲ ಬಣ್ಣದವರಿಗೂ ಒಪ್ಪುತ್ತದೆ. ಕಪ್ಪು, ಕಂದು, ಬಿಳಿ ಹೀಗೆ ಎಲ್ಲರ ಮುಖದ ಸೌಂದರ್ಯಕ್ಕೆ ಹೊಳಪು ನೀಡುತ್ತದೆ. ಕಣ್ಣಿನ ಮೇಲಿನ ರೆಪ್ಪೆ ಹಾಗೂ ಕೆಳರೆಪ್ಪೆಯ ವಾಟರ್‌ಲೈನ್‌ನಲ್ಲಿ ವೈಟ್ ಐ ಲೈನರ್ ಹೆಚ್ಚು ಬಳಕೆಯಾಗುತ್ತದೆ' ಎಂದು ವಿವರಿಸುತ್ತಾರೆ.

ಚಿಕ್ಕ ಕಣ್ಣುಗಳಿಗೆ: ಚಿಕ್ಕ ಕಣ್ಣುಗಳಿಗೆ ಬ್ರೈಟ್ ಲುಕ್ ನೀಡುತ್ತದೆ ಈ ವೈಟ್ ಐ ಲೈನರ್. ಹೀಗಾಗಿ ಕಣ್ಣುಗಳ ಮೇಕಪ್ ಅನ್ನು ವೈಟ್ ಐ ಲೈನರ್‌ನಿಂದಲೇ ಆರಂಭಿಸಿ. ಕಂಗಳ ಕೆಳರೆಪ್ಪೆ ಮೇಲೆ ವೈಟ್ ಐ ಲೈನರ್‌ನ ಸಿಂಗಲ್ ಕೋಟ್ ಹಚ್ಚಿ. ಬಳಿಕ ಅದರ ಹಿಂಭಾಗದಲ್ಲಿ ಕಾಜಲ್ ಬ್ಲ್ಯಾಕ್ ಅಥವಾ ಬೇರೆ ಬಣ್ಣದ ಐ ಲೈನರ್ ಹಚ್ಚಿ. ಇದರಿಂದ ಚಿಕ್ಕದಾದ ನಿಮ್ಮ ಕಂಗಳು ದೊಡ್ಡದಾಗಿ ಕಾಣಿಸುತ್ತವೆ.

## ಕ್ಯಾಟ್ ಐ ಲುಕ್

ಕೆಲವರು ಬೆಕ್ಕಿನ ಕಣ್ಣಿನ ಸೌಂದರ್ಯವನ್ನು ಮೆಚ್ಚುತ್ತಾರೆ. ಅದೇ ರೀತಿ ತಮ್ಮ ಕಣ್ಣುಗಳೂ ಇರಬೇಕಿತ್ತು ಎಂದು ಬಯಸುತ್ತಾರೆ. ಅಂತಹವರಿಗೆ ವೈಟ್ ಐ ಲೈನರ್ ವರದಾನ. ಕಣ್ಣು ರೆಪ್ಪೆಗಳ ಮೇಲೆ ಲಿಕ್ವಿಡ್ ಬ್ಲ್ಯಾಕ್ ಐ ಲೈನರ್‌ನ ಡಬಲ್ ಕೋಟ್ ಹಚ್ಚಿ. ತುದಿವರೆಗೆ ಬಂದಾಗ ಮೇಲ್ಭಾಗಕ್ಕೆ ಎಳೆಯಿರಿ. ಬಳಿಕ ಕೆಳಗಿನ ರೆಪ್ಪೆಯ ಕಾರ್ನರ್ ಭಾಗದಲ್ಲಿ ಲಿಕ್ವಿಡ್ ವೈಟ್ ಐ ಲೈನರ್ ಹಚ್ಚಿ ಅದನ್ನು ಕೆಳಭಾಗಕ್ಕೆ ತಂದು ತಿರುಚಿ. ಆಗ ಕಣ್ಣಿಗೆ ಕ್ಯಾಟ್ ಲುಕ್ ಬರುತ್ತದೆ.

ನೀವು ಕಂಗಳಿಗೆ ವಿಂಟೇಜ್ ಲುಕ್ ನೀಡಬಯಸುವಿರಾದರೆ ಕಂಗಳ ರೆಪ್ಪೆ ಬಳಿ ಮೊದಲು ಬ್ಲ್ಯಾಕ್ ಐ ಲೈನರ್‌ನ 2 ಕೋಟ್ ಹಚ್ಚಿ. ಅದು ಒಣಗಿದ ಬಳಿಕ ಅದರ ಬದಿಯಲ್ಲೇ ವೈಟ್‌ನ ಡಬಲ್ ಕೋಟ್ ಹಚ್ಚಿ. ಈ ರೀತಿಯ ಬ್ಲ್ಯಾಕ್–ವೈಟ್ ಮಿಶ್ರಣ ಉತ್ತಮ ವಿಂಟೇಜ್ ಲುಕ್ ನೀಡುತ್ತದೆ.

## ಅದ್ದೂರಿ ಲುಕ್

ಪಾರ್ಟಿ ಅಥವಾ ಮದುವೆ ಸಮಾರಂಭಗಳಲ್ಲಿ ಅದ್ದೂರಿ ಮೇಕಪ್ ಮಾಡಿಕೊಳ್ಳಲು ಬಯಸುವಿರಾದರೆ ಮೊದಲು ರೆಪ್ಪೆಗಳ ಮೇಲೆ ಕಪ್ಪು ಅಥವಾ ಕಂದು ಬಣ್ಣದ ಸಿಂಗಲ್ ಕೋಟ್ ಐ ಲೈನರ್ ಹಚ್ಚಿ. ಬಳಿಕ ಲಿಕ್ವಿಡ್ ವೈಟ್ ಐ ಲೈನರ್ ಹಚ್ಚಿ. ನಂತರ ಬ್ಲೂ, ಗ್ರೀನ್ ಅಥವಾ ಪರ್ಪಲ್ ಶೇಡ್‌ನ ಐ ಲೈನರ್ ಹಚ್ಚಿ. ಅದರ ಮೇಲೆ ಗ್ಲಿಟರ್ ಸಹ ಹಚ್ಚಬಹುದು. ಆಗ ಅದ್ದೂರಿತನದ ಮೇಕಪ್ ನಿಮ್ಮದಾಗುತ್ತದೆ.

ಸಿಂಪಲ್ ಲುಕ್: ಅದ್ದೂರಿತನವಲ್ಲದ ಸಿಂಪಲ್ ಲುಕ್ ನೀಡಲೂ ವೈಟ್ ಐ ಲೈನರ್ ಉತ್ತಮ ಆಯ್ಕೆ. ಸಿಂಪಲ್ ಲುಕ್ ಮೇಕಪ್ ಬಯಸಿದರೆ, ಮೊದಲು ರೆಪ್ಪೆಗಳ ಮೇಲೆ ಕಪ್ಪು ಬಣ್ಣದ ಲಿಕ್ವಿಡ್ ಐ ಲೈನರ್ ಹಚ್ಚಿ. ಬಳಿಕ ಪೆನ್ಸಿಲ್ ಶಿಮರೀ ವೈಟ್ ಐ ಲೈನರ್ ಹಚ್ಚಿ, ಲೈಟ್ ಆಗಿ ಸ್ಮಜ್ ಮಾಡಿ. ಇದರಿಂದ ಐ ಮೇಕಪ್‌ಗೆ ಸಿಂಪಲ್ ಎಫೆಕ್ಟ್ ಬರುತ್ತದೆ.

## ಕಪ್ಪು- ಬಿಳಿ ಲುಕ್

ನಿಮ್ಮ ಉಡುಪಿನ ಬಣ್ಣಕ್ಕೆ ತಕ್ಕಂತೆ ಕಣ್ಣಿನ ಮೇಕಪ್ ಇರಬೇಕೆಂದು ಬಯಸುವಿರಾದರೆ ಅದಕ್ಕೂ ವೈಟ್ ಐ ಲೈನರ್ ಜೊತೆಯಾಗುತ್ತದೆ. ಕಪ್ಪು– ಬಿಳಿ ಬಣ್ಣದ ಉಡುಪು ನಿಮ್ಮದಾದರೆ ಅದಕ್ಕೆ ತಕ್ಕುದಾಗಿ ಬ್ಲ್ಯಾಕ್ ಅಂಡ್ ವೈಟ್ ಕಾಂಬಿನೇಷನ್ ಬಳಸಿ ಮೇಕಪ್ ಮಾಡಿಕೊಳ್ಳಬಹುದು. ಮೇಲ್ಭಾಗದ ರೆಪ್ಪೆಗಳ ಮೇಲೆ ಬ್ಲ್ಯಾಕ್ ಲಿಕ್ವಿಡ್ ಐ ಲೈನರ್ ಹಾಗೂ ಕೆಳಭಾಗದ ರೆಪ್ಪೆ ಮೇಲೆ ವೈಟ್ ಲಿಕ್ವಿಡ್ ಐ ಲೈನರ್ ಹಚ್ಚಿ. ಅಗತ್ಯವೆನಿಸಿದರೆ ಇದನ್ನು ಬದಲಿಸಿ ಸಹ ಬಳಸಬಹುದು.

## ಭಿನ್ನ ಲುಕ್ ನೀಡಲು ವೈಟ್ ಐ ಲೈನರ್

ಕಣ್ನೋಟ ಭಿನ್ನವಾಗಿರಲಿ ಎಂದು ಬಹುತೇಕ ಲಲನೆಯರು ಬಯಸುತ್ತಾರೆ. ನೀವು ಬಯಸುವ ಲುಕ್ ನೀಡುವ ಜತೆಗೆ ಮುಖದ ಕೆಲವು ಲೋಪದೋಷಗಳನ್ನೂ ನಿವಾರಿಸುತ್ತದೆ ಈ ವೈಟ್ ಐ ಲೈನರ್.

ಕಂಗಳ ಕೆಳಗೆ ಡಾರ್ಕ್ ಸರ್ಕಲ್ಸ್ ಕೆಲವರಿಗೆ ಎದ್ದು ಕಾಣುತ್ತದೆ. ಅದನ್ನು ಅಡಗಿಸಲು ಪ್ರತಿಯೊಬ್ಬರೂ ಪ್ರಯತ್ನಿಸುತ್ತಲೇ ಇರುತ್ತಾರೆ. ಈ ಕಾರ್ಯಕ್ಕೆ ಪೆನ್ಸಿಲ್ ವೈಟ್ ಐ ಲೈನರ್ ಉತ್ತಮ ಆಯ್ಕೆ ಆಗಬಲ್ಲದು. ಪೆನ್ಸಿಲ್ ವೈಟ್ ಐ ಲೈನರ್ ಅನ್ನು ಲಘುವಾಗಿ ಸ್ಮಜ್ ಮಾಡುತ್ತಾ ಹರಡಿ. ಯಾವಾಗ ಐ ಲೈನರ್‌ನಿಂದ ಡಾರ್ಕ್ ಸರ್ಕಲ್ಸ್ ಇಡಿಯಾಗಿ ಕವರ್ ಆಗುತ್ತದೋ ಆಗ ಮೇಕಪ್ ಮಾಡಲು ಆರಂಭಿಸಿ.

ಬಿಳಿ ಬಣ್ಣದ ಐ ಶ್ಯಾಡೋ ಇಲ್ಲದೆಯೂ ಪೆನ್ಸಿಲ್ ವೈಟ್ ಐ ಲೈನರ್ ಬಳಸಬಹುದು. ನೀವು ವೈಟ್ ಐ ಲೈನರ್ ಅನ್ನು ಐ ಶ್ಯಾಡೋ ತರಹ ಬಳಸಿ, ಅದರ ಮೇಲೆ ಇತರ ಬಣ್ಣದ ಐಶ್ಯಾಡೋಗಳನ್ನು ಬಳಸುವಿರಾದರೆ, ಆಗ ಅದರ ಶೇಡ್ ಇನ್ನಷ್ಟು ಡೀಪ್ ಆಗಿ ಕಾಣುತ್ತದೆ. ಜೊತೆಗೆ ಹೆಚ್ಚು ಹೊತ್ತು ಮೇಕಪ್ ಹಾಳಾಗದಂತೆ ಕಾಪಿಟ್ಟುಕೊಳ್ಳಬಹುದು.

ಬೇರೆ ಬೇರೆ ಬಣ್ಣದ ಐ ಲೈನರ್ ಬಳಸುವಾಗ ಮೊದಲು ತಪ್ಪದೇ ವೈಟ್ ಐ ಲೈನರ್ ಹಚ್ಚಬೇಕು. ಬ್ಲೂ, ಗ್ರೀನ್, ಪರ್ಪಲ್‌ನಂಥ ಕಲರ್ ಫುಲ್ ಐ ಲೈನರ್ ಬಳಸುವ ಮುನ್ನ ಮರೆಯದೇ ಲಿಕ್ವಿಡ್ ವೈಟ್ ಐ ಲೈನರ್ ಹಚ್ಚಿ.

## ಹುಬ್ಬುಗಳ ಆಕರ್ಷಣೆಗೆ

ಕಣ್ಣುಗಳನ್ನಲ್ಲದೇ ಹುಬ್ಬುಗಳನ್ನೂ ಆಕರ್ಷಕವಾಗಿ ಕಾಣುವಂತೆ ಮಾಡುತ್ತದೆ ವೈಟ್ ಐ ಲೈನರ್. ಐಬ್ರೋ ಬೋನ್ ಮೇಲೆ ಪೆನ್ಸಿಲ್ ವೈಟ್ ಐ ಲೈನರ್ ಹಚ್ಚಿ ಅದನ್ನು ಚೆನ್ನಾಗಿ ಸ್ಮಜ್ ಮಾಡಿ. ಇದರಿಂದ ಕಣ್ಣುಗಳು ಮತ್ತು ಹುಬ್ಬುಗಳ ನಡುವಿನ ಅಂತರ ಹೆಚ್ಚುತ್ತದೆ. ಇದರಿಂದ ಹುಬ್ಬುಗಳು ಹೆಚ್ಚು ಆಕರ್ಷಕವಾಗಿ ಕಾಣುತ್ತವೆ.

ಹುಬ್ಬುಗಳು ಬಹು ತೆಳ್ಳಗೆ ಅಥವಾ ಆಕಾರ ಸರಿಯಾಗಿ ಇಲ್ಲದಿದ್ದರೆ, ಪೆನ್ಸಿಲ್ ವೈಟ್ ಐ ಲೈನರ್ ಬಳಸಿ ಹುಬ್ಬುಗಳಿಗೆ ಸರಿಯಾದ ಆಕಾರ ನೀಡಿ. ನಂತರ ಕಪ್ಪು ಅಥವಾ ಕಂದು ಬಣ್ಣದ ಶ್ಯಾಡೋ ಹಚ್ಚಿ, ಹುಬ್ಬುಗಳು ಆಕರ್ಷಕವಾಗಿ ಕಾಣುವಂತೆ ಮಾಡಿ.